2018 ಕ.ತೀ.ವ. 997

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಮಲ್ಲಿಕಾರ್ಜುನ ಮತ್ತು ಇತರರು –ವಿರುದ್ಧ–
ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ಅರ್ಜಿದಾರರು ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 147, 188, 504ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗಾಗಿ ಸಿ.ಸಿ.ಸಂಖ್ಯೆ:735/2016ರಲ್ಲಿ ಕ್ರಿಮಿನಲ್ ನಡಾವಳಿಗಳನ್ನು ರದ್ದುಪಡಿಸಲು ಕೋರಿ, ಈ ನ್ಯಾಯಾಲಯಕ್ಕೆ ಧಾವಿಸಿರುತ್ತಾರೆ.

ಪ್ರಥಮ ಮಾಹಿತಿ ವರದಿಯನ್ನು ಜಾಗರೂಕವಾಗಿ ಪರಿಶೀಲನೆ ಮಾಡಿದ ಮೇಲೆ, ತಹಸೀಲ್ದಾರ್ / ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟ್, ಹೊಸಪೇಟೆ ಇವರು, ಕಚೇರಿಯಲ್ಲಿದ್ದಾಗ ದಿನಾಂಕ: 28.12.2015ರಂದು ಸಂಜೆ ಸುಮಾರು 5.15ಕ್ಕೆ ತಿಪ್ಪೇಸ್ವಾಮಿ ಎಂಬ ಪೊಲೀಸ್ ಕಾನ್‌ಸ್ಟೇಬಲ್ ತಮ್ಮ ಕಚೇರಿಗೆ ಬಂದು ಕಚೇರಿಯ ಮುಂದೆ, ಮನವಿ ಪತ್ರ ನೀಡಲು ಕೆಲವು ಮಂದಿ ಗುಂಪುಗೂಡಿದ್ದರೆಂದು ತಿಳಿಸಿರುತ್ತಾರೆ. ಹಾಗೆ ಹೇಳುವುದರೊಂದಿಗೆ, ಪೊಲೀಸರು ಗುಂಪುಗೂಡಿದ ಸದರಿ ವ್ಯಕ್ತಿಗಳನ್ನು ಚದುರಿಸಿರುತ್ತಾರೆ. ಆದಾಗ್ಯೂ, ಕೇವಲ ಮೂರರಿಂದ

* ಕ್ರಿಮಿನಲ್ ಅರ್ಜಿ ಸಂಖ್ಯೆ: 100969/2016, ದಿನಾಂಕ: 2ನೇ ಫೆಬ್ರವರಿ, 2017.

ನಾಲ್ಕು ಜನರು ತಮ್ಮ ಕಚೇರಿಯ ಒಳಗೆ ಬಂದು, 43ಜನರ ಸಹಿಯನ್ನು ಒಳಗೊಂಡಿರುವಂಥ ಮನವಿಪತ್ರವನ್ನು ನೀಡಿರುತ್ತಾರೆ. ಆ ನಿರ್ದಿಷ್ಟ ದಿನದಂದು ಸಕ್ಷಮ ಪ್ರಾಧಿಕಾರವು ವಿಧಿಸಿದ್ದ, 144ನೇ ಪ್ರಕರಣವು ಜಾರಿಯಲ್ಲಿದ್ದು, ಸದರಿ ವ್ಯಕ್ತಿಗಳು ಗುಂಪುಗೂಡಿದ್ದು ಕಾನೂನುಬಾಹಿರವಾಗಿರುತ್ತದೆ. ಇದರಂತೆ ತಹಸೀಲ್ದಾರರು ಆ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ದೂರನ್ನು ಸಲ್ಲಿಸಿರುತ್ತಾರೆ. ಇದರ ಆಧಾರದ ಮೇಲೆ, ಪೊಲೀಸರು ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 147, 188ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗಾಗಿ ಅಪರಾಧ ಸಂಖ್ಯೆ: 252/ 2015ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಪೊಲೀಸರು ವಿಷಯವನ್ನು ತನಿಖೆ ಮಾಡಿ, ಮೇಲಿನ ಸದರಿ ಅಪರಾಧಗಳಿಗೆ ಸಂಬಂಧಿಸಿದ ಆರೋಪಪಟ್ಟಿಯನ್ನು ಸಲ್ಲಿಸಿರುತ್ತಾರೆ.

ವಾಸ್ತವಾಂಶಗಳನ್ನು ಪರಿಶೀಲಿಸಿದ ಮೇಲೆ ಖಂಡಿತ, ಭಾರತ ದಂಡ ಸಂಹಿತೆಯ 144ನೇ ಪ್ರಕರಣದಡಿಯಲ್ಲಿನ ಲೋಕ ನೌಕರನು ಪ್ರಖ್ಯಾಪಿಸಿದ ಯಾವುದೇ ಆದೇಶದ ಯಾವುದೇ ಉಲ್ಲಂಘನೆಯಾದಲ್ಲಿ ತರುವಾಯ ಭಾರತ ದಂಡ ಸಂಹಿತೆಯ 188ನೇ ಪ್ರಕರಣವು ಅನ್ವಯವಾಗುತ್ತದೆ. ಆದರೆ, ಇಲ್ಲಿನ ನಿರ್ದಿಷ್ಟ ಸಂದರ್ಭದಲ್ಲಿ, ಈಗಾಗಲೇ ನಿರೂಪಿಸಿದಂತೆ, 141, 143 ಹಾಗೂ 149ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳು ಅನ್ವಯವಾಗುವುದಿಲ್ಲ. ಇದಕ್ಕೆ ಮತ್ತಷ್ಟು ಒತ್ತುಕೊಟ್ಟು ಹೇಳುವುದಾದರೆ, ಇಡೀ ಆರೋಪಪಟ್ಟಿ ಯಾವ ದಿನ ಯಾವ ಸಮಯದಲ್ಲಿ ಸಕ್ಷಮ ಪ್ರಾಧಿಕಾರವು 144ನೇ ಪ್ರಕರಣವನ್ನು ಪ್ರಖ್ಯಾಪಿಸಿತ್ತು ಎಂಬುದನ್ನು ಎಲ್ಲಿಯೂ ಹೇಳಿರುವುದಿಲ್ಲವೆಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಸರಿಯಾಗಿಯೇ ವಾದಿಸಿರುತ್ತಾರೆ ಎಂಬುದಾಗಿರುತ್ತದೆ. ಭಾರತ ದಂಡ

ಸಂಹಿತೆಯ 144ನೇ ಪ್ರಕರಣವನ್ನು ವಿಧಿಸಿದ ದಿನಾಂಕ, ಸಮಯ ಹಾಗೂ ಸ್ಥಳವನ್ನು ತೋರಿಸುವಂಥ ಯಾವುದೇ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಭಾರತ ದಂಡ ಸಂಹಿತೆಯ 144ನೇ ಪ್ರಕರಣವನ್ನು ವಿಧಿಸಿರುವ ನಿರ್ದಿಷ್ಟ ಆದೇಶದ ಬಗ್ಗೆ ಆರೋಪ ಪಟ್ಟಿಯಲ್ಲಿ ಯಾವುದೇ ನಮೂದು ಇರುವುದಿಲ್ಲ. ಅದಿಲ್ಲದಿರುವಲ್ಲಿ, ಯಾರೊಬ್ಬರೂ, ಆ ನಿರ್ದಿಷ್ಟ ಸಮಯದಲ್ಲಿ 144ನೇ ಪ್ರಕರಣವು ಜಾರಿಯಲ್ಲಿತ್ತೆಂದು ಯಾರೂ ಊಹಿಸಲು ಸಾಧ್ಯವಾಗುವುದಿಲ್ಲ.

ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಹಾಗೂ ಜೆಎಂಎಫ್‌ಸಿ, ಹೊಸಪೇಟೆ ಇವರು ಸಂಜ್ಞೇಯಕ್ಕೆ ತೆಗೆದುಕೊಳ್ಳುವಾಗ, ಗಣಕೀಕೃತ ಆದೇಶ ಪ್ರತಿಯಲ್ಲಿ ಭರ್ತಿ ಮಾಡಿದ ಭಾಗಕ್ಕೆ ತೀರಾ ಹಗುರವಾಗಿ ಸಹಿ ಮಾಡಿರುವುದು ಕಂಡು ಬಂದಿದ್ದು, ಇದರಲ್ಲಿ ಭಾರತ ದಂಡ ಸಂಹಿತೆಯ 504ನೇ ಪ್ರಕರಣವೂ ಒಳಗೊಂಡಿದ್ದು, ಇದು ಪ್ರಾಸಿಕ್ಯೂಷನ್‌ನ ವಾದವನ್ನಾಗಲೀ ಇಲ್ಲವೇ ಆರೋಪ ಪಟ್ಟಿಯ ವಿಷಯವನ್ನಾಗಲೀ ಒಳಗೊಂಡಿರುವುದಿಲ್ಲ. ಇದು ಅಧಿಕಾರ ವ್ಯಾಪ್ತಿಯಿರುವ ಮ್ಯಾಜಿಸ್ಟ್ರೇಟರು ನ್ಯಾಯಿಕ ಮನಸ್ಥಿತಿಯನ್ನು ಇಟ್ಟುಕೊಂಡು ಗಮನಿಸಿರುವುದಿಲ್ಲವೆಂಬುದನ್ನು ತೋರಿಸುತ್ತದೆ. ಸಂಜ್ಞೇಯಕ್ಕೆ ತೆಗೆದುಕೊಳ್ಳುವಲ್ಲಿನ ಮ್ಯಾಜಿಸ್ಟ್ರೇಟರ ಆದೇಶದ ಪ್ರತಿಯನ್ನು ಈ ಮುಂದಿನಂತೆ ಓದಲಾಗಿರುತ್ತದೆ:

ಕಾಗದ ಪತ್ರಗಳನ್ನು ಪರಿಶೀಲಿಸಲಾಗಿರುತ್ತದೆ.

ಭಾರತ ದಂಡ ಸಂಹಿತೆಯ 149ನೇ ಪ್ರಕರಣದ ಓದಿನೊಂದಿಗೆ 143, 147, 504, 188ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತರ ವಿರುದ್ಧ ಸಂಜ್ಞೇಯವನ್ನು ತೆಗೆದುಕೊಳ್ಳಲಾಗಿರುತ್ತದೆ.

**ರಿಜಿಸ್ಟರ್ ಸಂಖ್ಯೆ: IIIರಲ್ಲಿ By: 20/7ಸಿಸಿ ಎಂದು ಪ್ರಕರಣವನ್ನು ನೋಂದಾಯಿಸಿಕೊಳ್ಳಲಾಗಿರುತ್ತದೆ.**

**ಮೇಲಿನ ವಾಸ್ತವಾಂಶಗಳು ಹಾಗೂ ಸಂದರ್ಭಗಳು ಹಾಗೂ ಮೇಲಿನ ಸದರಿ ಪ್ರಕರಣದಲ್ಲಿ ಕಂಡು ಬಂದ ಕಾನೂನು ಅನಿಶ್ಚಿತತೆಯನ್ನು ಗಮನಿಸಿ, ಮಾನ್ಯ ಮ್ಯಾಜಿಸ್ಟ್ರೇಟರು, ತಮ್ಮ ನ್ಯಾಯಿಕ ದೃಷ್ಟಿಕೋನದೊಂದಿಗೆ ಮೊಕದ್ದಮೆಯನ್ನು ಗಮನಿಸದೆ, ಅಪರಾಧಗಳನ್ನು ಸಂಜ್ಞೇಯಕ್ಕೆ ತೆಗೆದುಕೊಂಡು ಯಾಂತ್ರಿಕವಾಗಿ ಆದೇಶವನ್ನು ಹೊರಡಿಸಿದ್ದು, ಇದು ಕಾನೂನು ಸಮ್ಮತವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತೇನೆ. ಮುಂದುವರೆದು ಅದರ ಅನುಸರಣೆಯಲ್ಲಿ ಕೈಗೊಂಡಿರುವಂಥ ಎಲ್ಲಾ ಮುಂದಿನ ನಡಾವಳಿಗಳು ಸುಧಾರಿಸಲಾಗದಂಥ ಗಂಭೀರ ಅಕ್ರಮಗಳಿಂದ ದೂಷಿತವಾಗಿರುತ್ತವೆಂಬುದೂ ನನ್ನ ಅಭಿಪ್ರಾಯವಾಗಿರುತ್ತದೆ. ಹಾಗಾಗಿ, ನಡಾವಳಿಗಳನ್ನು ರದ್ದುಪಡಿಸುವುದನ್ನು ಹೊರತುಪಡಿಸಿದಂತೆ ಬೇರ್ಯಾವ ಮಾರ್ಗಗಳಿರುವುದಿಲ್ಲ.**

ಅರ್ಜಿದಾರರ ಪರ : ಶ್ರೀ ಗೌರಿಶಂಕರ್ ಎಚ್ ಮಠ್, ವಕೀಲರು
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಶಿವಪ್ರಭು ಎಸ್, ಎ.ಜಿ.ಎ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:**

ಅರ್ಜಿದಾರರ ಪರ ಮಾನ್ಯ ವಕೀಲರ ಹಾಗೂ ಪ್ರತ್ಯರ್ಜಿದಾರ ಸಂಖ್ಯೆ:1 ಸರ್ಕಾರದ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ವಾದಗಳನ್ನು ಆಲಿಸಿರುತ್ತೇವೆ. ದಾಖಲೆಗಳನ್ನು ಪರಿಶೀಲಿಸಿರುತ್ತೇವೆ. ಎರಡೂ ಕಡೆಯಿಂದ ಹಾಜರಾದ

ನ್ಯಾಯವಾದಿಗಳ ಸಮ್ಮತಿಯೊಂದಿಗೆ, ಈ ಅರ್ಜಿಯನ್ನು ಅಂಗೀಕರಿಸುವ ಹಂತದಲ್ಲೇ ವಿಲೆ ಮಾಡಲು ಕೈಗೆತ್ತಿಕೊಳ್ಳಲಾಗಿರುತ್ತದೆ.

2. ಅರ್ಜಿದಾರರು ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 147, 188, 504ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗಾಗಿ ಸಿ.ಸಿ.ಸಂಖ್ಯೆ:735/2016ರಲ್ಲಿ ಕ್ರಿಮಿನಲ್ ನಡಾವಳಿಗಳನ್ನು ರದ್ದುಪಡಿಸಲು ಕೋರಿ, ಈ ನ್ಯಾಯಾಲಯಕ್ಕೆ ಧಾವಿಸಿರುತ್ತಾರೆ.

3. ಪ್ರಥಮ ಮಾಹಿತಿ ವರದಿಯನ್ನು ಜಾಗರೂಕವಾಗಿ ಪರಿಶೀಲನೆ ಮಾಡಿದ ಮೇಲೆ, ತಹಸೀಲ್ದಾರ್ / ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟ್, ಹೊಸಪೇಟೆ ಇವರು, ಕಚೇರಿಯಲ್ಲಿದ್ದಾಗ ದಿನಾಂಕ: 28.12.2015ರಂದು ಸಂಜೆ ಸುಮಾರು 5.15ಕ್ಕೆ ತಿಪ್ಪೇಸ್ವಾಮಿ ಎಂಬ ಪೊಲೀಸ್ ಕಾನ್‌ಸ್ಟೇಬಲ್ ತಮ್ಮ ಕಚೇರಿಗೆ ಬಂದು ಕಚೇರಿಯ ಮುಂದೆ, ಮನವಿ ಪತ್ರ ನೀಡಲು ಕೆಲವು ಮಂದಿ ಗುಂಪುಗೂಡಿದ್ದರೆಂದು ತಿಳಿಸಿರುತ್ತಾರೆ. ಹಾಗೆ ಹೇಳುವುದರೊಂದಿಗೆ, ಪೊಲೀಸರು ಗುಂಪುಗೂಡಿದ ಸದರಿ ವ್ಯಕ್ತಿಗಳನ್ನು ಚದುರಿಸಿರುತ್ತಾರೆ. ಆದಾಗ್ಯೂ, ಕೇವಲ ಮೂರರಿಂದ ನಾಲ್ಕು ಜನರು ತಮ್ಮ ಕಚೇರಿಯ ಒಳಗೆ ಬಂದು, 43ಜನರ ಸಹಿಯನ್ನು ಒಳಗೊಂಡಿರುವಂಥ ಮನವಿಪತ್ರವನ್ನು ನೀಡಿರುತ್ತಾರೆ. ಆ ನಿರ್ದಿಷ್ಟ ದಿನದಂದು ಸಕ್ಷಮ ಪ್ರಾಧಿಕಾರವು ವಿಧಿಸಿದ್ದ, 144ನೇ ಪ್ರಕರಣವು ಜಾರಿಯಲ್ಲಿದ್ದು, ಸದರಿ ವ್ಯಕ್ತಿಗಳು ಗುಂಪುಗೂಡಿದ್ದು ಕಾನೂನುಬಾಹಿರವಾಗಿರುತ್ತದೆ. ಇದರಂತೆ ತಹಸೀಲ್ದಾರರು ಆ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ದೂರನ್ನು ಸಲ್ಲಿಸಿರುತ್ತಾರೆ. ಇದರ ಆಧಾರದ ಮೇಲೆ, ಪೊಲೀಸರು ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 147, 188ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗಾಗಿ ಅಪರಾಧ ಸಂಖ್ಯೆ: 252/2015ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಪೊಲೀಸರು ವಿಷಯವನ್ನು ತನಿಖೆ ಮಾಡಿ, ಮೇಲಿನ ಸದರಿ ಅಪರಾಧಗಳಿಗೆ ಸಂಬಂಧಿಸಿದ ಆರೋಪಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ಬಳ್ಳಾರಿ ಸ್ವಾಮಿ, ಶಿವಪುತ್ರಪ್ಪ ಹಾಗೂ ಪಂಪಾಪತಿಯರೆಂಬ ಪ್ರತ್ಯಕ್ಷ ಸಾಕ್ಷಿಗಳು, ಆ ದಿನ ತಹಸೀಲ್ದಾರರ ಕಚೇರಿ ಎದುರು ಸಾಕಷ್ಟು ಜನ ಗುಂಪು ಸೇರಿದ್ದರು. ಅವರನ್ನು ಪೊಲೀಸರು ಚದುರಿಸಿದ್ದರು. ತರುವಾಯ, ಅವರಲ್ಲಿ ನಾಲ್ವರು ತಹಸೀಲ್ದಾರರ ಕಚೇರಿಗೆ ಒಳಗೆ ಹೋಗಿ, ಮನವಿ ಪತ್ರವನ್ನು ನೀಡಿರುತ್ತಾರೆ. ಶ್ರೀ ಬಳ್ಳಾರಿ ಸ್ವಾಮಿಯವರು ತಮ್ಮ ಹೇಳಿಕೆಯಲ್ಲಿ, ತಹಸೀಲ್ದಾರರ ಕಚೇರಿಯ ಎದುರು 10–15 ಜನರು ಗುಂಪುಗೂಡಿದ್ದರೆಂದು ಹೇಳಿರುತ್ತಾರೆ. ಇತರೆ ಪ್ರತ್ಯಕ್ಷ ಸಾಕ್ಷಿಗಳು ಇಂತಹುದೇ ಹೇಳಿಕೆಗಳನ್ನು ನೀಡಿರುತ್ತಾರೆ. ತಹಸೀಲ್ದಾರರ ಕಚೇರಿ ಎದುರು ಗುಂಪುಗೂಡಿದ್ದಂಥ 10 ರಿಂದ 15 ಜನರು ಯಾರು ಎಂಬುದನ್ನು ಸಾಬೀತುಪಡಿಸುವ ಯಾವುದೇ ದಾಖಲೆ ಇರುವುದಿಲ್ಲ. ಅಥವಾ ಮನವಿ ಪತ್ರ ನೀಡಿದಂಥ ನಾಲ್ವರು ವ್ಯಕ್ತಿಗಳು ಸದರಿ ಗುಂಪಿನ ಸದಸ್ಯರಾಗಿದ್ದರೆ ಎಂಬುದನ್ನು ಆ ತರುವಾಯ ಮನವಿ ಪತ್ರವನ್ನು ನೀಡುವ ಉದ್ದೇಶಕ್ಕೆ ಸಂಬಂಧಿಸಿದಂತೆಯೇ ಆ ವ್ಯಕ್ತಿಗಳು ತಹಸೀಲ್ದಾರರ ಕಚೇರಿಗೆ ತೆರಳಿದ್ದರೆ ಎಂಬ ವಾಸ್ತವಿಕ ಆಯಾಮಗಳನ್ನು ವಿಷದವಾಗಿ ತಿಳಿಸುವಂಥ ಪ್ರತ್ಯಕ್ಷ ಸಾಕ್ಷಿದಾರರ ಯಾವ ಹೇಳಿಕೆಗಳೂ ಇರುವುದಿಲ್ಲ. ಮುಂದುವರೆದು ಕಚೇರಿಯ ಮುಂದೆ ಗುಂಪು ಗೂಡಿದ್ದಂಥ ಜನರ ಸಂಖ್ಯೆಯ ಬಗ್ಗೆ ಹಾಗೂ ಮನವಿ ಪತ್ರ ನೀಡಲು ಕಚೇರಿಯ ಒಳಗೆ ಹೋಗಿದ್ದಂಥ 3–4 ಜನರು ಸದರಿ ಗುಂಪಿನಲ್ಲಿಯೇ ಇದ್ದರೆ ಎಂಬುದಕ್ಕೆ ಸಂಬಂಧಿಸಿದಂತೆ ಪ್ರಥಮ ಮಾಹಿತಿ ವರದಿಯಲ್ಲಿ ತಹಸೀಲ್ದಾರರು ಅಂಥ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಈ ಹಿನ್ನಲೆಯಲ್ಲಿ, ಅರ್ಜಿದಾರರ ವಿರುದ್ಧದ ಆಪಾದಿತ ಅಪರಾಧಗಳನ್ನು ಪರಿಗಣಿಸಬೇಕಾಗಿರುತ್ತದೆ.

5. ಭಾರತ ದಂಡ ಸಂಹಿತೆಯ 141ನೇ ಪ್ರಕರಣವು 'ಕಾನೂನು ಬಾಹಿರವಾಗಿ ಗುಂಪುಗೂಡುವಿಕೆ' ಗೆ ಸಂಬಂಧಿಸಿದಂತೆ ಈ ಮುಂದಿನಂತೆ ಹೇಳಿರುತ್ತದೆ:

> *"141.* ***ವಿಧಿವಿರುದ್ಧ ಕೂಟ.–*** *ಐದು ಅಥವಾ ಹೆಚ್ಚು ಜನರ ಕೂಟವನ್ನು, ಅಂಥ ಕೂಟದಲ್ಲಿ ಸೇರಿದ ವ್ಯಕ್ತಿಗಳ ಏಕೋದ್ದೇಶವು–*

*ಮೊದಲನೆಯದಾಗಿ: ಅಪರಾಧಿಕ ಬಲದಿಂದ ಅಥವಾ ಅಪರಾಧಿಕ ಬಲದ ಪ್ರದರ್ಶನದಿಂದ, ಕೇಂದ್ರ ಸರ್ಕಾರವನ್ನು ಅಥವಾ ಯಾವುದೇ ರಾಜ್ಯ ಸರ್ಕಾರವನ್ನು ಅಥವಾ ಸಂಸತ್ತನ್ನು ಅಥವಾ ಯಾವುದೇ ರಾಜ್ಯದ ವಿಧಾನಮಂಡಲವನ್ನು ಅಥವಾ ಲೋಕ ನೌಕರನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಯಾವನೇ ಲೋಕ ನೌಕರನಿಗೆ ಭಯವನ್ನು ಹುಟ್ಟಿಸುವುದಾಗಿದ್ದರೆ; ಅಥವಾ*

*ಎರಡನೆಯದಾಗಿ: ಯಾವುದೇ ವಿಧಿಯ ಅಥವಾ ಯಾವುದೇ ವಿಧಿಯ ಆದೇಶಿಕೆಯ ಜಾರಿಯನ್ನು ಪ್ರತಿರೋಧಿಸುವುದಾಗಿದ್ದರೆ; ಅಥವಾ*

*ಮೂರನೆಯದಾಗಿ: ಯಾವುದೇ ಕೇಡನ್ನು ಅಥವಾ ಅಪರಾಧಿಕ ಅತಿಕ್ರಮಣ ಅಥವಾ ಇತರ ಅಪರಾಧಗಳನ್ನು ಮಾಡುವುದಾಗಿದ್ದ; ಅಥವಾ*

*ನಾಲ್ಕನೆಯದಾಗಿ: ಯಾವನೇ ವ್ಯಕ್ತಿಗೆ ಅಪರಾಧಿಕ ಬಲವನ್ನು ಪ್ರಯೋಗಿಸಿ ಅಥವಾ ಅಪರಾಧಿಕ ಬಲವನ್ನು ಪ್ರದರ್ಶಿಸಿ, ಯಾವುದೇ ಸ್ವತ್ತನ್ನು ತೆಗೆದುಕೊಳ್ಳುವುದು ಅಥವಾ ಅದರ ಸ್ವಾಧೀನವನ್ನು ಪಡೆಯುವುದಾಗಿದ್ದರೆ ಅಥವಾ ಯಾವನೇ ವ್ಯಕ್ತಿಯು ಮಾರ್ಗದ ಅಥವಾ ನೀರಿನ ಉಪಯೋಗದ ಅಧಿಕಾರದ ಅಥವಾ ಅವನ ಅನುಭೋಗದಲ್ಲಿ ಅಥವಾ ಸ್ವಾಧೀನದಲ್ಲಿ ಇರುವ ಇತರ ಅಮೂರ್ತ ಅಧಿಕಾರದ ಅನುಭೋಗವನ್ನು ತಪ್ಪಿಸುವುದಾಗಿದ್ದರೆ ಅಥವಾ ಯಾವುದೇ ಅಧಿಕಾರವನ್ನು ಅಥವಾ ಇದೆಯೆಂದು ಭಾವಿಸಲಾದ ಅಧಿಕಾರವನ್ನು ಕಾರ್ಯಗತಗೊಳಿಸುವುದಾಗಿದ್ದರೆ; ಅಥವಾ*

ಐದನೆಯದಾಗಿ: ಅಪರಾಧಿಕ ಬಲವನ್ನು ಪ್ರಯೋಗಿಸಿ ಅಥವಾ ಬಲವನ್ನು ಪ್ರದರ್ಶಿಸಿ ಒಬ್ಬ ವ್ಯಕ್ತಿಯು ವಿಧಿ ಸಮ್ಮತವಾಗಿ ಮಾಡಬೇಕಾಗಿರದ ಯಾವುದೇ ಕೃತ್ಯವನ್ನು ಮಾಡುವಂತೆ ಅಥವಾ ಅವನು ವಿಧಿಸಮ್ಮತವಾಗಿ ಯಾವುದನ್ನು ಮಾಡಲು ಹಕ್ಕುಳ್ಳವನಾಗಿರುವನೋ ಅದನ್ನು ಮಾಡದ ಹಾಗೆ ಒತ್ತಾಯಿಸುವುದಾಗಿದ್ದರೆ,

–*"ವಿಧಿವಿರುದ್ಧಕೂಟ"* ಎಂದು ಕರೆಯಲಾಗುವುದು.

*ವಿವರಣೆ.– ಒಟ್ಟು ಸೇರಿದಾಗ ವಿಧಿವಿರುದ್ಧವಾಗಿರದಿದ್ದ ಕೂಟವು, ಆ ತರುವಾಯ ವಿಧಿವಿರುದ್ಧ ಕೂಟವಾಗಬಹುದು."*

"ಕಾನೂನು ಬಾಹಿರವಾಗಿ ಗುಂಪು ಗೂಡಿರುವುದನ್ನು" ರೂಪಿಸಿರುವ ಹಾಗೆ ತಹಸೀಲ್ದಾರರ ಕಚೇರಿಗೆ ಐದು ಅಥವಾ ಅದಕ್ಕಿಂತ ಹೆಚ್ಚಿನ ಜನರು ಪ್ರವೇಶಿಸಿರುತ್ತಾರೆಂಬುದು ದೂರಿನಲ್ಲಿದ್ದು, ಈ ವಿಚಾರದಲ್ಲಿ ಬಚ್ಚಿಡುವಂಥದ್ದು ಏನೂ ಇರುವುದಿಲ್ಲ. ತಹಸೀಲ್ದಾರರ ಕಚೇರಿಯ ಹೊರಗೆ ಎಷ್ಟು ಜನ ಗುಂಪುಗೂಡಿದ್ದರೆಂಬುದನ್ನೂ ಸಹ ಪ್ರಥಮ ಮಾಹಿತಿ ವರದಿಯಲ್ಲಿ ಹೇಳಿರುವುದಿಲ್ಲ. ಪೊಲೀಸರೂ ಸಹ ಈ ಆಯಾಮವು ಸಂಬಂಧಪಡುವಷ್ಟರ ಮಟ್ಟಿಗೆ ತನಿಖೆ ನಡೆಸಿರುವುದಿಲ್ಲ. ತಹಸೀಲ್ದಾರರ ಕಚೇರಿಗೆ ಹೋದಂಥ ನಾಲ್ವರನ್ನು ಹೊರತುಪಡಿಸಿದಂತೆ, ತಹಸೀಲ್ದಾರರ ಕಚೇರಿಯ ಮುಂದೆ ನೆರೆದಿದ್ದ ಎಲ್ಲಾ ಇತರ ವ್ಯಕ್ತಿಗಳನ್ನು ಕುರಿತಂತೆ ಕೂಡ ದಾಖಲೆಯಲ್ಲಿ ಸೇರಿರುವುದಿಲ್ಲ. ಒಂದು ವೇಳೆ, ಭಾರತ ದಂಡ ಸಂಹಿತೆಯ 141 ಹಾಗೂ 143ನೇ ಪ್ರಕರಣಗಳಿಗನುಸಾರವಾಗಿ, ಆರೋಪ ಪಟ್ಟಿಯಲ್ಲಿ ಇಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳ

> ಹೆಸರುಗಳನ್ನು ಪೊಲೀಸರು ಸೇರಿಸಬಹುದಾಗಿತ್ತು. ಆದರೆ, ಯಾರೊಬ್ಬರು ತಹಸೀಲ್ದಾರರ ಕಚೇರಿಯ ಒಳಗೆ ಪ್ರವೇಶಿಸಿ, ಮನವಿ ನೀಡಿದಂಥ ನಾಲ್ಕುಜನ ವ್ಯಕ್ತಿಗಳೊಂದಿಗೆ ಗುಂಪುಗೂಡಿದ್ದಂಥ ವ್ಯಕ್ತಿಗಳನ್ನು ಪತ್ತೆ ಹಚ್ಚಿರುವುದಿಲ್ಲ. ಆದ್ದರಿಂದ, ಫಿರ್ಯಾದು ಹಾಗೂ ಆರೋಪಪಟ್ಟಿಯ ಸಾಧಾರಣ ಓದಿನಿಂದಲೇ ಪಿರ್ಯಾದು ಹಾಗೂ ಆರೋಪ ಪಟ್ಟಿಯಲ್ಲಿ ಮಾಡಲಾದ ಆಪಾದನೆಗಳಿಗೆ ಭಾರತ ದಂಡ ಸಂಹಿತೆಯ 143ನೇ ಪ್ರಕರಣವನ್ನು ಅನ್ವಯಿಸಬೇಕಾಗುತ್ತದೆಂದು ಹೇಳಲಾಗುವುದಿಲ್ಲ.

6. ಭಾರತ ದಂಡ ಸಂಹಿತೆಯ 146ನೇ ಪ್ರಕರಣದಲ್ಲಿ ಪರಿಭಾಷಿಸುವ 'ದೊಂಬಿ' ಈ ಮುಂದಿನಂತಿರುತ್ತದೆ:

> *"146. **ದೊಂಬಿ.–** ಒಂದು ವಿಧಿವಿರುದ್ಧ ಕೂಟವು ಅಥವಾ ಅದರ ಯಾವನೇ ಸದಸ್ಯನು ಅಂಥ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಬಲವನ್ನು ಅಥವಾ ಹಿಂಸೆಯನ್ನು ಪ್ರಯೋಗಿಸಿದರೆ ಅಂಥ ಕೂಟದ ಪ್ರತಿಯೊಬ್ಬ ಸದಸ್ಯನು ದೊಂಬಿ ಮಾಡಿದ ಅಪರಾಧದ ಬಗ್ಗೆ ತಪ್ಪಿತಸ್ಥನಾಗುತ್ತಾನೆ."*

ಪ್ರಥಮ ಮಾಹಿತಿ ವರದಿ ಹಾಗೂ ಆರೋಪ ಪಟ್ಟಿ ಕಾಗದ ಪತ್ರಗಳನ್ನು ಮತ್ತೊಮ್ಮೆ ನೋಡಿದ ಮೇಲೆ, ತಹಸೀಲ್ದಾರರ ಕಚೇರಿಯ ಮುಂದೆ ಗುಂಪುಗೂಡಿದ್ದ ಯಾರೇ ವ್ಯಕ್ತಿಗಳ ವಿರುದ್ಧ ಕಾನೂನುಬಾಹಿರವಾಗಿ ಗುಂಪುಗೂಡುವಿಕೆಯ ಏಕೋದ್ದೇಶವನ್ನು ಈಡೇರಿಸುವಲ್ಲಿ/ಮುಂದುವರಿಕೆಯಲ್ಲಿ ಯಾವುದೇ ಬಲ ಅಥವಾ ಹಿಂಸೆಯನ್ನು ಅವರು ಪ್ರಯೋಗಿಸಿದರೆ ಅಥವಾ ಕಾನೂನು ಬಾಹಿರವಾಗಿ ಗುಂಪುಗೂಡಿದ ಯಾರೇ ಸದಸ್ಯರು ಭಾರತ ದಂಡ ಸಂಹಿತೆಯ 148 ಹಾಗೂ

149ನೇ ಪ್ರಕರಣಗಳನ್ನು ಅನ್ವಯವಾಗುವಂತೆ ಮಾರಕಾಸ್ತ್ರಗಳೊಂದಿಗೆ ಶಸ್ತ್ರ ಸನ್ನದ್ಧರಾಗಿದ್ದರೆಂದು ಆಪಾದಿಸುವಂಥ ಯಾವ ಆಪಾದನೆಗಳೂ ಇರುವುದಿಲ್ಲ. ಆದ್ದರಿಂದ, ಯಾವುದೇ ಆಯಾಮದಿಂದ ನೋಡಿದರೂ, ಮೇಲಿನ ಸದರಿ ಉಪಬಂಧಗಳು ಒಳಗೊಂಡಿರುವ ಅಂಶಗಳನ್ನು, ಆರೋಪಪಟ್ಟಿ ಹಾಗೂ ಪ್ರಥಮ ಮಾಹಿತಿ ವರದಿಯಲ್ಲಿ ಮಾಡಿರುವ ಆರೋಪಗಳನ್ನು ಹೇಗಿದೆಯೋ ಹಾಗೆ ಒಪ್ಪಿಕೊಂಡರೂ ಸಹ ಅನ್ವಯಿಸಲಾಗುವುದಿಲ್ಲ.

7. ಪೊಲೀಸರು, ಆ ನಿರ್ದಿಷ್ಟ ಸಮಯದಲ್ಲಿ 144ನೇ ಪ್ರಕರಣವು ಜಾರಿಯಲ್ಲಿತ್ತು. ಆದ್ದರಿಂದ ಐದು ಅಥವಾ ಅದಕ್ಕಿಂತ ಹೆಚ್ಚು ಜನರು ಗುಂಪುಗೂಡುವುದು 'ಕಾನೂನು ಬಾಹಿರವಾಗಿ ಗುಂಪು ಗೂಡುವುದೆಂದು' ಪರಿಗಣಿಸಲಾಗುತ್ತದೆಂದೂ ಹೇಳಿ ಭಾರತ ದಂಡ ಸಂಹಿತೆಯ 188ನೇ ಪ್ರಕರಣವನ್ನು ಅನ್ವಯಿಸಿರುತ್ತಾರೆ. ಭಾರತ ದಂಡ ಸಂಹಿತೆಯ 188ನೇ ಪ್ರಕರಣವು ಲೋಕ ನೌಕರನು ವಿದ್ಯುಕ್ತವಾಗಿ ಪ್ರಖ್ಯಾಪಿಸಿದ ಆದೇಶದ ಉಲ್ಲಂಘನೆ ಕುರಿತು ಮಾತನಾಡುತ್ತಾ, ಅದರಲ್ಲೂ ನಿರ್ದಿಷ್ಟವಾಗಿ, ಒಂದು ಆದೇಶವನ್ನು ಹೊರಡಿಸಲು ಕಾನೂನು ಬದ್ಧವಾಗಿ ಸಕ್ಷಮನಾದ ಒಬ್ಬ ಲೋಕ ನೌಕರನು ಪ್ರಖ್ಯಾಪಿಸಿದ ಅಂಥ ಯಾವುದೇ ಆದೇಶದಿಂದ, ಒಂದು ನಿರ್ದಿಷ್ಟ ಕೃತ್ಯವನ್ನು ಮಾಡದಿರಲು ಅಥವಾ ತನ್ನ ಸ್ವಾಧೀನದಲ್ಲಿ ಅಥವಾ ಆಡಳಿತದಲ್ಲಿರುವ ಒಂದು ನಿರ್ದಿಷ್ಟ ಸ್ವತ್ತಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ವ್ಯವಸ್ಥೆಯನ್ನು ಮಾಡಲು ತಾನು ನಿರ್ದೇಶಿತವಾಗಿರುವೆನೆಂದು ತಿಳಿದೂ ಅಂಥ ನಿರ್ದೇಶನವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಭಾರತ ದಂಡ ಸಂಹಿತೆಯ 143ನೇ ಪ್ರಕರಣದಡಿಯಲ್ಲಿ ದಂಡನೀಯನಾಗತಕ್ಕದ್ದೆಂದು ತಿಳಿಸುತ್ತದೆ.

8. ವಾಸ್ತವಾಂಶಗಳನ್ನು ಪರಿಶೀಲಿಸಿದ ಮೇಲೆ ಖಂಡಿತ, ಭಾರತ ದಂಡ ಸಂಹಿತೆಯ 144ನೇ ಪ್ರಕರಣದಡಿಯಲ್ಲಿನ ಲೋಕ ನೌಕರನು ಪ್ರಖ್ಯಾಪಿಸಿದ ಯಾವುದೇ

ಆದೇಶದ ಯಾವುದೇ ಉಲ್ಲಂಘನೆಯಾದಲ್ಲಿ ತರುವಾಯ ಭಾರತ ದಂಡ ಸಂಹಿತೆಯ 188ನೇ ಪ್ರಕರಣವು ಅನ್ವಯವಾಗುತ್ತದೆ. ಆದರೆ, ಇಲ್ಲಿನ ನಿರ್ದಿಷ್ಟ ಸಂದರ್ಭದಲ್ಲಿ, ನಾನು ಈಗಾಗಲೇ ನಿರೂಪಿಸಿದಂತೆ, 141, 143 ಹಾಗೂ 149ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳು ಅನ್ವಯವಾಗುವುದಿಲ್ಲ. ಇದಕ್ಕೆ ಮತ್ತಷ್ಟು ಒತ್ತುಕೊಟ್ಟು ಹೇಳುವುದಾದರೆ, ಇಡೀ ಆರೋಪಪಟ್ಟಿ ಯಾವ ದಿನ ಯಾವ ಸಮಯದಲ್ಲಿ ಸಕ್ಷಮ ಪ್ರಾಧಿಕಾರವು 144ನೇ ಪ್ರಕರಣವನ್ನು ಪ್ರಖ್ಯಾಪಿಸಿತ್ತು ಎಂಬುದನ್ನು ಎಲ್ಲಿಯೂ ಹೇಳಿರುವುದಿಲ್ಲವೆಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಸರಿಯಾಗಿಯೇ ವಾದಿಸಿರುತ್ತಾರೆ ಎಂಬುದಾಗಿರುತ್ತದೆ. ಭಾರತ ದಂಡ ಸಂಹಿತೆಯ 144ನೇ ಪ್ರಕರಣವನ್ನು ವಿಧಿಸಿದ ದಿನಾಂಕ, ಸಮಯ ಹಾಗೂ ಸ್ಥಳವನ್ನು ತೋರಿಸುವಂಥ ಯಾವುದೇ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಭಾರತ ದಂಡ ಸಂಹಿತೆಯ 144ನೇ ಪ್ರಕರಣವನ್ನು ವಿಧಿಸಿರುವ ನಿರ್ದಿಷ್ಟ ಆದೇಶದ ಬಗ್ಗೆ ಆರೋಪ ಪಟ್ಟಿಯಲ್ಲಿ ಯಾವುದೇ ನಮೂದು ಇರುವುದಿಲ್ಲ. ಅದಿಲ್ಲದಿರುವಲ್ಲಿ, ಯಾರೊಬ್ಬರೂ, ಆ ನಿರ್ದಿಷ್ಟ ಸಮಯದಲ್ಲಿ 144ನೇ ಪ್ರಕರಣವು ಜಾರಿಯಲ್ಲಿತ್ತೆಂದು ಯಾರೂ ಊಹಿಸಲು ಸಾಧ್ಯವಾಗುವುದಿಲ್ಲ.

9. ಅದು ಇರಬಹುದಾದಂತೆ, ಭಾರತ ದಂಡ ಸಂಹಿತೆಯ 188ನೇ ಪ್ರಕರಣದಡಿಯಲ್ಲಿನ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳುವ ದೃಷ್ಟಿಯಲ್ಲಿ, ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 195ನೇ ಪ್ರಕರಣವನ್ನು ಅನುಪಾಲಿಸದ ಹೊರತು ಸಂಜ್ಞೇಯಕ್ಕೆ ತೆಗೆದುಕೊಳ್ಳಲು ಯಾವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 195(1)ನೇ ಪ್ರಕರಣದ ಸೂಕ್ತ ಭಾಗವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

***"195. ಲೋಕ ನೌಕರರ ವಿಧಿಬದ್ಧ ಪ್ರಾಧಿಕಾರದ ಅವಹೇಳನಕ್ಕಾಗಿ ಲೋಕ ನ್ಯಾಯಕ್ಕೆ ವಿರುದ್ಧವಾದ***

***ಅಪರಾಧಗಳಿಗಾಗಿ ಮತ್ತು ಸಾಕ್ಷ್ಯವಾಗಿ ನೀಡಿದ ದಸ್ತಾವೇಜುಗಳಿಗೆ ಸಂಬಂಧಿಸಿದ ಅಪರಾಧಗಳಿಗಾಗಿ ಪ್ರಾಸಿಕ್ಯೂಷನ್.–*** *(1) ಯಾವುದೇ ನ್ಯಾಯಾಲಯವು .–*

*(ಎ)(i) ಭಾರತ ದಂಡ ಸಂಹಿತೆಯ (1860ರ 45) 172 ರಿಂದ 188ರ (ಎರಡೂ ಪ್ರಕರಣಗಳು ಸೇರಿದಂತೆ) ವರೆಗಿನ ಪ್ರಕರಣಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು; ಅಥವಾ*

*(ii) ಅಂಥ ಅಪರಾಧವನ್ನು ದುಷ್ಪ್ರೇರಿಸುವ ಅಥವಾ ಮಾಡುವ ಪ್ರಯತ್ನವನ್ನು; ಅಥವಾ*

*(iii) <u>ಸಂಬಂಧಪಟ್ಟ ಲೋಕ ನೌಕರನ ಅಥವಾ ಯಾರಿಗೆ ಅವನು ಆಡಳಿತದಲ್ಲಿ ಅಧೀನನಾಗಿರುವನೋ ಆ ಇತರ ಯಾವನೇ ಲೋಕ ನೌಕರನ ಲಿಖಿತ ಫಿರ್ಯಾದಿನ ಮೇಲಲ್ಲದೆ</u> ಅಂಥ ಅಪರಾಧವನ್ನು ಮಾಡುವ ಬಗೆಗಿನ ಯಾವುದೇ ಅಪರಾಧಿಕ ಒಳಸಂಚನ್ನು;"*

*–ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.*

(ಒತ್ತು ನೀಡಲಾಗಿದೆ)

ಮೇಲಿನ ಸದರಿ ಉಪಬಂಧಗಳ ಹಿನ್ನೆಲೆಯಲ್ಲಿ, ತಹಸೀಲ್ದಾರರಿಂದಾಗಲೀ ಅಥವಾ ಪೊಲೀಸರಿಂದಾಗಲೀ ನ್ಯಾಯಾಲಯಕ್ಕೆ ಯಾವುದೇ ಫಿರ್ಯಾದು ಬಂದಿರುವುದಿಲ್ಲ. ಇದರಿಂದ, ನ್ಯಾಯಾಲಯವು ಅಪರಾಧವನ್ನು ಸಂಜ್ಞೇಯಕ್ಕೆ

ತೆಗೆದುಕೊಳ್ಳಬಹುದಾಗಿರುತ್ತದೆ. ಭಾರತ ದಂಡ ಸಂಹಿತೆಯ 195(1)ನೇ ಪ್ರಕರಣದ (ಎ) ಖಂಡದ (iii)ನೇ ಉಪ–ಖಂಡದಲ್ಲಿ ಬಳಸಿದ 'ಫಿರ್ಯಾದು' ಪದಾವಳಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 2(ಡಿ) ಪ್ರಕರಣದಡಿಯಲ್ಲಿನ 'ಫಿರ್ಯಾದು'ಗೆ ನೀಡಲಾದ ಪರಿಭಾಷೆಯಂತೆ ಅರ್ಥೈಸಿಕೊಳ್ಳತಕ್ಕದ್ದು. 'ಫಿರ್ಯಾದು' ಎಂದರೆ, ಯಾರೇ ಜ್ಞಾತ ಅಥವಾ ಅಜ್ಞಾತ ವ್ಯಕ್ತಿಯು ಒಂದು ಅಪರಾಧ ಎಸಗಿದ್ದಾನೆಂದು ಮ್ಯಾಜಿಸ್ಟ್ರೇಟನಿಗೆ ಮೌಖಿಕವಾಗಿ ಅಥವಾ ಲಿಖಿತದಲ್ಲಿ, ಈ ಸಂಹಿತೆಯ ಮೇರೆಗೆ ಆ ಮ್ಯಾಜಿಸ್ಟ್ರೇಟನು ಕ್ರಮ ಕೈಕೊಳ್ಳಬೇಕೆಂದು ಉದ್ದೇಶಿಸಿ, ಮಾಡಲಾದ ಯಾವುದೇ ಆಪಾದನೆಯಾಗಿದ್ದು, ಆದರೆ, ಅದು ಪೊಲೀಸು ವರದಿಯನ್ನು ಒಳಗೊಳ್ಳುವುದಿಲ್ಲ. ಆದ್ದರಿಂದ ಭಾರತ ದಂಡ ಸಂಹಿತೆಯ 188ನೇ ಪ್ರಕರಣದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಆರೋಪ ಪಟ್ಟಿಗಿಂತ ಕಡಿಮೆಯಿರುವಂಥ ಯಾವುದೇ ವರದಿಯನ್ನು ಸಲ್ಲಿಸಲು ಪೊಲೀಸರು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ.

10. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಹಾಗೂ ಜೆಎಂಎಫ್‌ಸಿ, ಹೊಸಪೇಟೆ ಇವರು ಸಂಜ್ಞೇಯಕ್ಕೆ ತೆಗೆದುಕೊಳ್ಳುವಾಗ, ಗಣಕೀಕೃತ ಆದೇಶ ಪ್ರತಿಯಲ್ಲಿ ಭರ್ತಿ ಮಾಡಿದ ಭಾಗಕ್ಕೆ ತೀರಾ ಹಗುರವಾಗಿ ಸಹಿ ಮಾಡಿರುವುದು ಕಂಡು ಬಂದಿದ್ದು, ಇದರಲ್ಲಿ ಭಾರತ ದಂಡ ಸಂಹಿತೆಯ 504ನೇ ಪ್ರಕರಣವೂ ಒಳಗೊಂಡಿದ್ದು, ಇದು ಪ್ರಾಸಿಕ್ಯೂಷನ್‌ನ ವಾದವನ್ನಾಗಲೀ ಇಲ್ಲವೇ ಆರೋಪ ಪಟ್ಟಿಯ ವಿಷಯವನ್ನಾಗಲೀ ಒಳಗೊಂಡಿರುವುದಿಲ್ಲ. ಇದು ಅಧಿಕಾರ ವ್ಯಾಪ್ತಿಯಿರುವ ಮ್ಯಾಜಿಸ್ಟ್ರೇಟರು ನ್ಯಾಯಿಕ ಮನಸ್ಥಿತಿಯನ್ನು ಇಟ್ಟುಕೊಂಡು ಗಮನಿಸಿರುವುದಿಲ್ಲವೆಂಬುದನ್ನು ತೋರಿಸುತ್ತದೆ. ಸಂಜ್ಞೇಯಕ್ಕೆ ತೆಗೆದುಕೊಳ್ಳುವಲ್ಲಿನ ಮ್ಯಾಜಿಸ್ಟ್ರೇಟರ ಆದೇಶದ ಪ್ರತಿಯನ್ನು ಈ ಮುಂದಿನಂತೆ ಓದಲಾಗಿರುತ್ತದೆ:

*ಕಾಗದ ಪತ್ರಗಳನ್ನು ಪರಿಶೀಲಿಸಲಾಗಿರುತ್ತದೆ.*

*ಭಾರತ ದಂಡ ಸಂಹಿತೆಯ 149ನೇ ಪ್ರಕರಣದ ಓದಿನೊಂದಿಗೆ 143, 147, 504, 188ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತರ ವಿರುದ್ಧ ಸಂಜ್ಞೇಯವನ್ನು ತೆಗೆದುಕೊಳ್ಳಲಾಗಿರುತ್ತದೆ.*

*ರಿಜಿಸ್ಟರ್ ಸಂಖ್ಯೆ: IIIರಲ್ಲಿ ಸಿಸಿ ಎಂದು ಪ್ರಕರಣವನ್ನು ನೋಂದಾಯಿಸಿಕೊಳ್ಳಲಾಗಿರುತ್ತದೆ By: 20/7.*

11. ವಾಸ್ತವವಾಗಿ, ದಂಡ ಪ್ರಕ್ರಿಯಾ ಸಂಹಿತೆಯ 190ನೇ ಪ್ರಕರಣವು ಸದರಿ ಉಪಬಂಧದ ಅನುಪಾಲನೆಯನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳುವ ಮೊದಲು ಮ್ಯಾಜಿಸ್ಟ್ರೇಟರ ಮೇಲೆ ಹೊಣೆಗಾರಿಕೆಯನ್ನು ವಿಧಿಸುತ್ತದೆ. ಸಂಹಿತೆಯ 190ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿರುತ್ತದೆ.

> *"190. ಮ್ಯಾಜಿಸ್ಟ್ರೇಟನು ಅಪರಾಧಗಳನ್ನು ಗಮನಿಸಿ ಕ್ರಮ ಕೈಕೊಳ್ಳುವುದು.– (1) ಈ ಅಧ್ಯಾಯದ ಉಪಬಂಧಗಳಿಗೊಳಪಟ್ಟು, ಮೊದಲ ವರ್ಗದ ಯಾವನೇ ಮ್ಯಾಜಿಸ್ಟ್ರೇಟನು ಮತ್ತು (2)ನೇ ಒಳಪ್ರಕರಣದ ಮೇರೆಗೆ ಈ ಬಗ್ಗೆ ವಿಶೇಷವಾಗಿ ಶಕ್ತಗೊಳಿಸಲಾದ ಎರಡನೇ ವರ್ಗದ ಯಾವನೇ ಮ್ಯಾಜಿಸ್ಟ್ರೇಟನು ಯಾವುದೇ ಅಪರಾಧವನ್ನು,–*
>
> *(ಎ) ಅಂಥ ಅಪರಾಧವು ಒಳಗೊಂಡಿರುವ ಸಂಗತಿಗಳ ಬಗ್ಗೆ ಫಿರ್ಯಾದನ್ನು ಸ್ವೀಕರಿಸಿದ ಮೇಲೆ;*
>
> *(ಬಿ) ಅಂಥ ಸಂಗತಿಗಳನ್ನು ಕುರಿತು ಪೊಲೀಸು ವರದಿಯ ಮೇಲೆ;*

*(ಸಿ) ಪೊಲೀಸು ಅಧಿಕಾರಿಯಲ್ಲದ ಯಾವನೇ ಇತರ ವ್ಯಕ್ತಿಯಿಂದ ಪಡೆದ ಮಾಹಿತಿಯ ಮೇಲೆ ಅಥವಾ ಅಂಥ ಅಪರಾಧವನ್ನು ಮಾಡಲಾಗಿದೆಯೆಂಬ ಅವನ ಸ್ವಂತ ತಿಳಿವಳಿಕೆಯ ಮೇಲೆ–*

*–ಗಮನಿಸಿ ಕ್ರಮ ತೆಗೆದುಕೊಳ್ಳಬಹುದು.*

*(2) ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟನು, ವಿಚಾರಣೆ ಅಥವಾ ಆರೋಪ ವಿಚಾರಣೆ ಮಾಡಲು ತಾನು ಸಕ್ಷಮನಾಗಿರುವಂಥ ಅಪರಾಧಗಳ ಬಗ್ಗೆ, (1)ನೇ ಉಪ-ಪ್ರಕರಣದ ಮೇರೆಗೆ ಗಮನಿಸಿ ಕ್ರಮ ತೆಗೆದುಕೊಳ್ಳಲು ಎರಡನೇ ವರ್ಗದ ಯಾವನೇ ಮ್ಯಾಜಿಸ್ಟ್ರೇಟನು ಶಕ್ತಗೊಳಿಸಬಹುದು.*

ಮೇಲಿನ ಸದರಿ ಉಪಬಂಧವನ್ನು ನಿಖರವಾಗಿ ಅರ್ಥೈಸಿಕೊಂಡ ಮೇಲೆ, ಮ್ಯಾಜಿಸ್ಟ್ರೇಟರು ಯಾವುದೇ ಅಪರಾಧ ಎಸಗದಂಥ ವಾಸ್ತವಾಂಶಗಳ ಮೇಲೆ ಫಿರ್ಯಾದು ಅಥವಾ ಯಾವುದೇ ಪೊಲೀಸ್ ವರದಿಯನ್ನು ಸ್ವೀಕರಿಸಿದ ಮೇಲೆ ಕೂಡ ಸಂಜ್ಞೇಯಕ್ಕೆ ತೆಗೆದುಕೊಳ್ಳುವ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಮ್ಯಾಜಿಸ್ಟ್ರೇಟರು ಯಾವುದೇ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳುವಾಗಲೆಲ್ಲಾ ಇವರು ತಮ್ಮ ನ್ಯಾಯಿಕ ಮನಸ್ಥಿತಿಯನ್ನು, ಅನ್ವಯಿಸಿ, ಪೊಲೀಸ್ ವರದಿಯಲ್ಲಿ ಒಳಗೊಂಡ ಅಂಶಗಳು ಅಥವಾ ಪಕ್ಷಕಾರರು ಸಲ್ಲಿಸಿದ ಖಾಸಗಿ ದೂರಿನ ಅಂಶಗಳನ್ನು ಸೂಕ್ಷ್ಮವಾಗಿ ಓದಿಕೊಳ್ಳಬೇಕಾಗಿರುತ್ತದೆ. ಅಲ್ಲದೆ ಅದರಲ್ಲಿ ನಿರೂಪಿಸಿದ ಅಂಶಗಳು ಯಾವುದೇ ಅಪರಾಧವನ್ನು ರೂಪಿಸಲು ಸಹಾಯಕಾರಿಯಾಗಿವೆಯೇ ಇಲ್ಲವೆ ಎಂಬುದನ್ನು ಮನವರಿಕೆ ಮಾಡಿಕೊಂಡು, ತರುವಾಯ ನಿರ್ದಿಷ್ಟವಾಗಿ ಸದರಿ ಅಪರಾಧಗಳನ್ನು ನಮೂದಿಸಿ, ಮ್ಯಾಜಿಸ್ಟ್ರೇಟರು ಸಂಜ್ಞೇಯಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ

ನಂತರದ ನಡಾವಳಿಗಳೊಂದಿಗೆ ಮುಂದುವರೆಯಬೇಕಾಗುತ್ತದೆ. ಅಂಥ ಯಾವುದೇ ವಾಸ್ತವಾಂಶಗಳು ಇಲ್ಲದಿರುವಲ್ಲಿ, ಯಾವುದೇ ಅಪರಾಧವನ್ನು ರೂಪಿಸಲು ಮ್ಯಾಜಿಸ್ಟ್ರೇಟರಿಗೆ ಸಂಜ್ಞೇಯುವನ್ನು ತೆಗೆದುಕೊಳ್ಳಲಾಗಲೀ ಹಾಗೂ ಮುಂದುವರೆಯಲಾಗಲೀ ಯಾವುದೇ ಅಧಿಕಾರ ವ್ಯಾಪ್ತಿಯಿರುವುದಿಲ್ಲ.

12. ದಂಡ ಪ್ರಕ್ರಿಯಾ ಸಂಹಿತೆಯ 204ನೇ ಪ್ರಕರಣದಡಿಯಲ್ಲಿ ಆಪಾದಿತರನ್ನು ಸಮನು ಮಾಡಲು ಅಧಿಕಾರವಿರುವಂಥ ನ್ಯಾಯಿಕ ಮ್ಯಾಜಿಸ್ಟ್ರೇಟರು, ಆಪಾದಿತರನ್ನು ಸಮನು ಮಾಡುವುದು ಗಂಭೀರ ವಿಚಾರವಾಗಿದ್ದು, ಕ್ರಿಮಿನಲ್ ಕಾನೂನನ್ನು ಕ್ರಮ ಕೈಗೊಳ್ಳುವ ವಿಷಯದಂತಹ ಸೂಚನೆಯಾಗಿ ರೂಪಿಸುವಂತಿರುವುದಿಲ್ಲವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿರುತ್ತದೆ. ಸಮನು ಮಾಡುವ ಆದೇಶವು, ಮ್ಯಾಜಿಸ್ಟ್ರೇಟರು ಪ್ರಕರಣದ ವಾಸ್ತವಾಂಶಗಳ ಕಡೆಗೆ ಹಾಗೂ ಅದಕ್ಕೆ ಅನ್ವಯವಾಗುವ ಕಾನೂನಿನ ಕಡೆಗೆ ತಮ್ಮ ಸಂಪೂರ್ಣ ಗಮನವನ್ನು ನೀಡಿದ್ದಾರೆಂಬುದನ್ನು ಪ್ರತಿಫಲಿಸಲೇಬೇಕಾಗಿರುತ್ತದೆ. ಆಪಾದಿತನನ್ನು ಸಮನು ಮಾಡುವ ಆದೇಶವು ಸಕಾರಣ ಆದೇಶವಾಗಿರಬಾರದು ಹಾಗೂ ವಿವರಣಾತ್ಮಕವಾಗಿರಬಾರದು. ಆದರೆ ಇದು ಯಾವುದೇ ಅನಿಶ್ಚಿತತೆ ಹಾಗೂ ಕಾನೂನು ಬಾಹಿರತೆಯಿಂದ ಬಾಧಿತವಾಗಿರಬಾರದು. ಕಾರಣಗಳನ್ನು ಪ್ರತ್ಯೇಕಿಸದಿರುವೆಡೆ, ಅವು ಅಲ್ಪ ಪ್ರಮಾಣದಲ್ಲಿದ್ದಾಗ್ಯೂ, ಸಮನುಗಳನ್ನು ಹೊರಡಿಸುವುದಕ್ಕೆ ಇದು ಯುಕ್ತ ಪ್ರಕರಣವೆಂಬ ತೀರ್ಮಾನಕ್ಕೆ ಬಂದಾಗ, ಅಂಥ ಸಮನು ಹೊರಡಿಸುವ ಆದೇಶವು ಕಾನೂನು ಸಮ್ಮತವಾಗಿರುವುದಿಲ್ಲ. ಸಮನುಗಳನ್ನು ಹೊರಡಿಸುವಾಗ ಮ್ಯಾಜಿಸ್ಟ್ರೇಟರನ್ನು ಸೂಕ್ಷ್ಮವಾಗಿ ತನಿಖೆ ಮಾಡಲು ಹಾಗೂ ದಾಖಲೆ ಮೇಲಿರುವ ವಿಷಯಗಳನ್ನು ಮೌಲ್ಯಮಾಪನ ಮಾಡಲು ಅಗತ್ಯಪಡಿಸುವಂತಿರುವುದಿಲ್ಲ. ಆದಾಗ್ಯೂ, ಕಾರಣಗಳು ಅಲ್ಪವಾಗಿರಲಿ ಅಥವಾ ಸಂಕ್ಷಿಪ್ತವಾಗಿರಲಿ, ಮ್ಯಾಜಿಸ್ಟ್ರೇಟರು ಗಮನ ನೀಡಿರುವುದನ್ನು ಸೂಚಿಸುವಂಥ ಕಾರಣಗಳನ್ನು ದಾಖಲಿಸಲು ಈತನನ್ನು ಅಗತ್ಯಪಡಿಸಲಾಗಿರುತ್ತದೆ. ಆ ಹಂತದಲ್ಲಿರುವ ಈತನಿಂದ ಇದೆಲ್ಲವನ್ನು ನಿರೀಕ್ಷಿಸಲಾಗುತ್ತದೆ. 204ನೇ ಪ್ರಕರಣದಡಿಯಲ್ಲಿನ 'ಅಭಿಪ್ರಾಯ' ಹಾಗೂ 'ಯುಕ್ತ ಆಧಾರ' ಎಂಬ ಪದಾವಳಿಗಳು,

ಸಮನನ್ನು ಹೊರಡಿಸುವುದಕ್ಕೆ ಮೊದಲು, ಮ್ಯಾಜಿಸ್ಟ್ರೇಟನು ಕನಿಷ್ಠ ಯಾವ ವಿಷಯದ ಮೇಲೆ ಸಮನನ್ನು ಹೊರಡಿಸಿರುತ್ತೇನೆಂದು ತನ್ನ ಅಭಿಪ್ರಾಯವನ್ನು ತೋರಿಸಬೇಕಾಗಿರುತ್ತದೆ. ನ್ಯಾಯಿಕ ದೃಷ್ಟಿಕೋನದೊಂದಿಗೆ ವಿಷಯವನ್ನು ಗಮನಿಸದೆ, ಪ್ರಕರಣದ ವಾಸ್ತವಾಂಶಗಳನ್ನು ಲಕ್ಷಿಸದೆ, ಯಾಂತ್ರಿಕವಾಗಿ, ಆರೋಪ ಪಟ್ಟಿಯ ಅಥವಾ ಫಿರ್ಯಾದಿನ ಆರಂಭಿಕ ಭಾಗವನ್ನಷ್ಟೆ ಗಮನಿಸಿ ಸಮನನ್ನು ಹೊರಡಿಸುವುದು ಮ್ಯಾಜಿಸ್ಟ್ರೇಟರು ಲಕ್ಷ್ಯವಿರಿಸಿ ಕಾರ್ಯನಿರ್ವಹಿಸಿರುತ್ತಾರೆಂಬುದನ್ನು ಪುಷ್ಟೀಕರಿಸುವುದಿಲ್ಲ.

13. ಮೇಲಿನ ವಾಸ್ತವಾಂಶಗಳು ಹಾಗೂ ಸಂದರ್ಭಗಳು ಹಾಗೂ ಮೇಲಿನ ಸದರಿ ಪ್ರಕರಣದಲ್ಲಿ ಕಂಡು ಬಂದ ಕಾನೂನು ಅನಿಶ್ಚಿತತೆಯನ್ನು ಗಮನಿಸಿ, ನಾನು ಮಾನ್ಯ ಮ್ಯಾಜಿಸ್ಟ್ರೇಟರು, ತಮ್ಮ ನ್ಯಾಯಿಕ ದೃಷ್ಟಿಕೋನದೊಂದಿಗೆ ಮೊಕದ್ದಮೆಯನ್ನು ಗಮನಿಸದೆ, ಅಪರಾಧಗಳನ್ನು ಸಂಜ್ಞೇಯಕ್ಕೆ ತೆಗೆದುಕೊಂಡು ಯಾಂತ್ರಿಕವಾಗಿ ಆದೇಶವನ್ನು ಹೊರಡಿಸಿದ್ದು, ಇದು ಕಾನೂನು ಸಮ್ಮತವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತೇನೆ. ಮುಂದುವರೆದು ಅದರ ಅನುಸರಣೆಯಲ್ಲಿ ಕೈಗೊಂಡಿರುವಂಥ ಎಲ್ಲಾ ಮುಂದಿನ ನಡಾವಳಿಗಳು ಸುಧಾರಿಸಲಾಗದಂಥ ಗಂಭೀರ ಅಕ್ರಮಗಳಿಂದ ದೂಷಿತವಾಗಿರುತ್ತವೆಂಬುದೂ ನನ್ನ ಅಭಿಪ್ರಾಯವಾಗಿರುತ್ತದೆ. ಹಾಗಾಗಿ, ನಡಾವಳಿಗಳನ್ನು ರದ್ದುಪಡಿಸುವುದನ್ನು ಹೊರತುಪಡಿಸಿದಂತೆ ಬೇರ್‍ಯಾವ ಮಾರ್ಗಗಳಿರುವುದಿಲ್ಲ.

14. ಮೇಲೆ ಹೇಳಿದ ವಿಚಾರಗಳ ದೃಷ್ಟಿಯಿಂದ, ಈ ಮುಂದಿನ ಆದೇಶವನ್ನು ಹೊರಡಿಸಲಾಗಿರುತ್ತದೆ.

## ಆಜ್ಞೆ

ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ. ತರುವಾಯ ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 147, 188 ಹಾಗೂ 504ನೇ

ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಸಿ.ಸಿ.ಸಂಖ್ಯೆ: 735/2016ರಲ್ಲಿನ ಹೊಸಪೇಟೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ಯವರು ತೆಗೆದುಕೊಂಡ ಸಂಜ್ಞೇಯತೆ ಹಾಗೂ ಅದರ ಮುಂದಿನ ಎಲ್ಲಾ ನಡಾವಳಿಗಳನ್ನು ಈ ಮೂಲಕ ರದ್ದುಪಡಿಸಲಾಗಿರುತ್ತದೆ.

ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ (ಜನರಲ್)ರವರಿಗೆ, ಈ ಪ್ರಕರಣದಲ್ಲಿ ಪ್ರಸ್ತಾಪಿಸಲಾದಂಥ ಅಧಿಕಾರ ಹೊಂದಿರುವ ನ್ಯಾಯಿಕ ಅಧಿಕಾರಿಗಳಿಗೆ ಸರಿಯಾದ ಮಾರ್ಗದರ್ಶನ ನೀಡುವುದಕ್ಕೆ ಸಂಬಂಧಿಸಿದಂತೆ ನ್ಯಾಯಿಕ ಅಕಾಡಮಿಗೆ ಈ ಆದೇಶವನ್ನು ಕಳುಹಿಸಿಕೊಡಲು, ಸದರಿ ಆದೇಶದ ಪ್ರತಿಯನ್ನು ರವಾನಿಸಲು ರಿಜಿಸ್ಟರಿಗೆ ನಿರ್ದೇಶಿಸಲಾಗಿರುತ್ತದೆ.

ಮುಖ್ಯ ಅರ್ಜಿಯನ್ನು ವಿಲೆ ಮಾಡಿರುವ ಹಿನ್ನೆಲೆಯಲ್ಲಿ ತಡೆಯಾಜ್ಞೆಗೆ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: 1/2016ನ್ನು ಪರಿಗಣಿಸಲಾಗುವುದಿಲ್ಲ. ಹಾಗಾಗಿ ಸದರಿ ಅರ್ಜಿಯನ್ನು ವಜಾ ಮಾಡಲಾಗಿರುವುದೆಂದು ಅರ್ಥೈಸಿಕೊಳ್ಳುವುದು.